ಬೆಂಗಳೂರು ನಗರದಲ್ಲಿ ಮದ್ಯಪಾನ ಮಾಡಿ ವಾಹನ ಚಲಿಸುವವರ ಬಗ್ಗೆ

224 (310) ಶ್ರೀ ಸಂಪಂಗಿ ಎನ್. (ಬಾಗೇಪಲ್ಲಿ) : ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರದಲ್ಲಿ ಮದ್ಯಪಾನ ಸೇವಿಸಿ ವಾಹನ ಚಾಲನೆ ಮಾಡುವವರ ವಿರುದ್ಧ ಎಷ್ಟು ಪ್ರಕರಣಗಳನ್ನು 2 ವರ್ಷದ ಅವಧಿಯಲ್ಲಿ ದಾಖಲಿಸಲಾಗಿದೆ.

ಆ) ಆ ಪ್ರಕರಣಗಳಲ್ಲಿ ವಸೂಲಿ ಮಾಡಲ್ಪಟ್ಟ 2 ವರ್ಷದ ದಂಡದ ಹಣವೆಷ್ಟು; ಯಾವ ಯಾವ ಠಾಣೆಗಳಲ್ಲಿ ಎಷ್ಟು ಪ್ರಕರಣಗಳನ್ನು ದಾಖಲು ಮಾಡಲಾಗಿದೆ (ವಿವರವಾರು ಒದಗಿಸುವುದು); ಠಾಣಾವಾರು ವಿವರ ಒದಗಿಸುವುದು;

ಇ) ಈ ಪ್ರಕರಣವನ್ನು ಪತ್ತೆ ಹಚ್ಚಲು ಯಾವ ಯಾವ ಸಮಯ ವನ್ನು ಇಲಾಖೆಯು ನಿಗದಿ ಮಾಡಲಾಗಿದೆ ಮತ್ತು ಈ ಪರೀಕ್ಷೆಗೆ ಬಳಸುವ ಯಂತ್ರ ಯಾವುವು; ಈ ಯಂತ್ರಗಳ ಸಂಖ್ಯೆ ಎಷ್ಟು;

ಈ) ಈ ಪ್ರಕರಣಗಳಲ್ಲಿ ವಸೂಲಿ ಮಾಡಲ್ಪಟ್ಟ ದಂಡದ ಶುಲ್ಕವನ್ನು ಯಾವ ಯಾವ ಕಾರ್ಯಗಳಿಗೆ ವಿನಿಯೋಗಿಸಿಕೊಳ್ಳಲಾಗುವುದು (ವಿವರ ಒದಗಿಸುವುದು)?

ಶ್ರೀ ವಿ.ಎಸ್.ಆಚಾರ್ಯ (ಗೃಹ ಸಚಿವರು) :

ಅ)

2008	2009	ಒಟ್ಟು ಪ್ರಕರಣಗಳು
30,675	38,992	69,667

ಆ) 2 ವರ್ಷದ ಅವಧಿಯಲ್ಲಿ ಬೆಂಗಳೂರು ನಗರದ ಸಂಚಾರ ವಿಭಾಗದಲ್ಲಿ ವಸೂಲಾದ ದಂಡಗಳ ಮೊತ್ತವನ್ನು ಠಾಣಾವಾರು ಅನುಬಂಧದಲ್ಲಿ ಲಗತ್ತಿಸಲಾಗಿದೆ.

ಇ) ಮದ್ಯಪಾನ ಮಾಡಿ ವಾಹನ ಚಾಲನೆ ಮಾಡಿದವರ ವಿರುದ್ಧ ಪ್ರಕರಣ ದಾಖಲು ಮಾಡಲು ಯಾವುದೇ ಸಮಯವನ್ನು ನಿಗದಿ ಮಾಡಲಾಗಿರುವುದಿಲ್ಲ. ಸಾಮಾನ್ಯವಾಗಿ ಮದ್ಯಪಾನ ಮಾಡಿ ವಾಹನ ಚಾಲನೆ ಮಾಡುವ ಪ್ರಕರಣಗಳು ಸಾಯಂಕಾಲ 07–00 ಗಂಟೆಯಿಂದ ರಾತ್ರಿ 11–30 ಗಂಟೆಯವರೆಗೆ ಹೆಚ್ಚಾಗಿರುತ್ತದೆ.

ಈ ಪ್ರಕರಣವನ್ನು ಪತ್ತೆ ಹಚ್ಚಲು ಆಲ್ಕೋಮೀಟರ್ ಎಂಬ ಯಂತ್ರವನ್ನು ಬಳಸಲಾಗುತ್ತಿದೆ. ಹಾಗೂ ಇಂಟರ್‌ಸೆಪ್ಟರ್ ವಾಹನದಲ್ಲಿಯೂ ಆಲ್ಕೋಮೀಟರ್ ಯಂತ್ರವನ್ನು ಅಳವಡಿಸಲಾಗಿದೆ.

ಬೆಂಗಳೂರು ನಗರ ಸಂಚಾರ ವಿಭಾಗದಲ್ಲಿರುವ ಒಟ್ಟು ಆಲ್ಕೋಮೀಟರ್ ಯಂತ್ರಗಳ ಸಂಖ್ಯೆ: 158

ಈ) ಈ ಪ್ರಕರಣಗಳಲ್ಲಿ ಘನ ನ್ಯಾಯಾಲಯದಿಂದ ವಿಧಿಸಲ್ಪಟ್ಟ ದಂಡದ ಹಣವನ್ನು ರಾಜ್ಯ ಹುಜೂರು ಖಜಾನೆಗೆ ಜಮಾ ಮಾಡಲಾಗುವುದು. ಸದರಿ ಹಣವನ್ನು ಅಭಿವೃದ್ಧಿ ಕಾರ್ಯಗಳಿಗೆ ಉಪಯೋಗಿಸಲಾಗುತ್ತಿದೆ.

ಪ್ರಶ್ನೆ (ಅ) : ಅನುಬಂಧ

ಕ್ರ. ಸಂ.	ಪೊಲೀಸ್ ಠಾಣೆ	2008		2009		ಒಟ್ಟು	
		ಪ್ರಕರಣಗಳು	ದಂಡದ ಮೊತ್ತ	ಪ್ರಕರಣಗಳು	ದಂಡದ ಮೊತ್ತ	ಪ್ರಕರಣಗಳು	ದಂಡದ ಮೊತ್ತ
1	ಉಪ್ಪಾರಪೇಟೆ ಸಂಚಾರ	1129	1591500	1323	1930500	2452	3522000
2	ಚಿಕ್ಕಪೇಟೆ —"—	803	1156000	773	1162000	1576	2318000
3	ಸಿಟಿ ಮಾರ್ಕೆಟ್ —"—	2052	3078000	2671	4006500	4723	7084500
4	ಮಾಗಡಿ ರಸ್ತೆ —"—	643	792000	327	484500	970	1276500
5	ವಿಜಯನಗರ —"—	1523	2564900	1073	1884500	2596	4449400
6	ಬ್ಯಾಟರಾಯನಪುರ —"—	689	1033500	869	1287000	1558	2320500
7	ಕಾಮಾಕ್ಷಿಪಾಳ್ಯ —"—	958	1387500	442	656500	1400	2044000
8	ಮಲ್ಲೇಶ್ವರಂ —"—	1858	2787000	2295	3427500	4153	6214500
9	ರಾಜಾಜಿನಗರ —"—	663	1020100	698	1047000	1361	2067100
10	ಯಶವಂತಪುರ —"—	794	1191000	1211	1807500	2005	2998500
11	ಪೀಣ್ಯ —"—	497	745500	496	744000	993	1489500
12	ಆರ್.ಟಿ.ನಗರ ಸಂಚಾರ	377	316000	349	523500	726	839500
13	ಹೆಬ್ಬಾಳ ಸಂಚಾರ	458	755700	246	399800	704	1155500
14	ಯಲಹಂಕ	589	883500	513	769500	1102	1653000

	ಸಂಚಾರ						
15	ಚಿಕ್ಕಜಾಲ ಸಂಚಾರ	10	11800	94	146300	104	158100
16	ದೇವನಹಳ್ಳಿ ಸಂಚಾರ	1	800	50	74750	51	75550
17	ಚಾಮರಾಜ ಪೇಟೆ	2504	3621000	4143	6184500	6647	9805500
18	ಬಸವನಗುಡಿ ಸಂಚಾರ	2291	3271500	2177	3256500	4468	6528000
19	ಜಯನಗರ ಸಂಚಾರ	2730	3892500	2319	3435000	5049	7327500
20	ಬನಶಂಕರಿ ಸಂಚಾರ	1853	3127250	1964	2919000	3817	6046250
21	ಕುಮಾರಸ್ವಾಮಿ ಲೇಔಟ್	655	1039900	523	780000	1178	1819900
22	ಹಲಸೂರು ಸಂಚಾರ	452	452000	598	550000	1050	1002000
23	ಇಂದಿರಾ ನಗರ —"—	445	425000	752	737000	1197	1162000
24	ಕೆ.ಆರ್.ಪುರಂ. —"—	465	419000	755	722000	1220	1141000
25	ಫ್ರೇಜರ್ ಟೌನ್ —"—	561	556000	1169	1148000	1730	1704000
26	ಬಾಣಸವಾಡಿ —"—	526	473000	866	793000	1392	1266000
27	ಶಿವಾಜಿನಗರ —"—	512	512000	855	855000	1367	1367000
28	ಕಬ್ಬನ್ ಪಾರ್ಕ್ —"—	330	33000	801	801000	1131	1131000
29	ಸದಾಶಿವನಗರ —"—	107	107000	537	537000	644	644000
30	ಹೈಗ್ರೌಂಡ್ಸ್ —"—	791	791000	610	610000	1401	1401000
31	ಹಲಸೂರು ಗೇಟ್ —"—	598	897000	820	1025000	1418	1922000
32	ಅಶೋಕನಗರ —"—	536	536000	947	947000	1483	1483000
33	ವಿಲ್ಸನ್‌ಗಾರ್ಡನ್ —"—	216	216000	352	352000	568	568000
34	ವಿಮಾನ ನಿಲ್ದಾಣ—"—	1051	1051000	1076	1076000	2127	2127000
35	ಆಡುಗೋಡಿ —"—	336	311000	1186	1177000	1522	1488000
36	ಮಡಿವಾಳ —"—	373	373000	975	975000	1348	1348000
37	ಮೈಕೋ ಲೇಔಟ್	299	261500	1079	848500	1378	1110000

	—"—						
38	ಎಲಕ್ಟ್ರಾನಿಕ್ ಸಿಟ	–	–	457	457000	457	457000
	—"—						
39	ವೈಟ್‌ಫೀಲ್ಡ್	–	–	601	712800	601	712800
	—"—						
	ಒಟ್ಟು	30,675	4,19,77,450	38,992	5,12,49,650	69,667	93,22,7100

ಚಿಕ್ಕಬಳ್ಳಾಪುರದಲ್ಲಿ ಅಕ್ರಮ ಮರಳು ಸಾಗಾಣಿಕೆ

225 (311) ಶ್ರೀ ಸಂಪಂಗಿ ಎನ್. (ಬಾಗೇಪಲ್ಲಿ) : ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಗಣಿ ಮತ್ತು ಭೂವಿಜ್ಞಾನ ಇಲಾಖೆಯ ವತಿಯಿಂದ ಯಾವ ಯಾವ ಗಣಿಗಾರಿಕೆಗಳು ಎಲ್ಲೆಲ್ಲಿ ನಡೆಯುತ್ತಿವೆ (ವಿವರ ಒದಗಿಸುವುದು);

ಆ) ಇದಕ್ಕೆ ಸರ್ಕಾರದಿಂದ ಅನುಮತಿ ಪಡೆಯಲಾಗಿದೆಯೇ ಮತ್ತು ಯಾವ ಯಾವ ಗುತ್ತಿಗೆದಾರರಿಗೆ ಗುತ್ತಿಗೆಯನ್ನು ನೀಡಲಾಗಿದೆ; ವಿವರವಾರು ಒದಗಿಸುವುದು;

ಇ) ಈ ಗಣಿಗುತ್ತಿಗೆಯನ್ನು ಪೂರೈಸಲು ನೀಡಿರುವ ಕಾಲಾವಕಾಶದ ದಿನಾಂಕ ಯಾವುದು; ತಾಲ್ಲೂಕುವಾರು ವಿವರವನ್ನು ಒದಗಿಸುವುದು;

ಈ) ಮರಳು ಸಾಗಾಣಿಕೆಯು ತೀವ್ರ ರೀತಿಯಲ್ಲಿ ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಉ) ಹಾಗಿದ್ದಲ್ಲಿ, ಯಾವ ಕ್ರಮ ಕೈಗೊಳ್ಳಲಾಗಿದೆ;

ಊ) ಮರಳು ಸಾಗಾಣಿಕೆಯಿಂದ ಅಂತರಜಲ ಮಟ್ಟ ಕುಸಿದಿರುವುದು ಹಾಗೂ ಕುಡಿಯುವ ನೀರಿಗೆ ಅನಾನುಕೂಲವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಮರಳು ಸಾಗಾಣಿಕೆ ನಿಲ್ಲಿಸಲು ಕೈಗೊಳ್ಳುವ ಕ್ರಮವೇನು?

ಶ್ರೀ ಬಿ.ಎಸ್.ಯಡಿಯೂರಪ್ಪ (ಮುಖ್ಯಮಂತ್ರಿಯವರು) :

ಅ) ಜಿಲ್ಲೆಯಲ್ಲಿ ಒಟ್ಟು 206 ಕಲ್ಲುಗಣಿ ಗುತ್ತಿಗೆಗಳು 16 ಅಲಂಕಾರಿಕ ಶಿಲೆಗಳ ಕಲ್ಲುಗಣಿ ಗುತ್ತಿಗೆಗಳು ಹಾಗೂ 5 ಖನಿಜ ಗಣಿ ಗುತ್ತಿಗೆಗಳನ್ನು ಮಂಜೂರು ಮಾಡಲಾಗಿದೆ. ವಿವರಗಳನ್ನು ಅನುಬಂಧ–1 ರಲ್ಲಿ ನೀಡಿದೆ.

ಆ) ಈ ಗುತ್ತಿಗೆಗಳನ್ನು ನಿಯಮಾನುಸಾರ ಮಂಜೂರು ಮಾಡಲಾಗಿರುತ್ತದೆ. ವಿವರಗಳನ್ನು ಅನುಬಂಧ–1 ರಲ್ಲಿ ನೀಡಿದೆ.